ಅವರು ಒಂದಷ್ಟು ರಂಜನೀಯ ಮಾಡಿ ಸೊಗಸಾದ ಕತೆಗಳನ್ನೆ ಹೆಣೆದುಬಿಡುತ್ತಾರೆ. ಆ ದಿವಸ ಏಳುವುದು ತಡವಾಗಿದ್ದರಿಂದ ಉರಿಸಿಂಗನಂತ ಉಗ್ರಪ್ರತಾಪದ ಬಾಸ್ ಏನೆನ್ನುವರೋ ಎಂಬ ಭಯದಲ್ಲಿ ಅಳಕುತ್ತ ಆಕೆ ಡೆಸ್ಕಿಗೆ ಬಂದಳು. ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯನ್ನು ಕಣ್ದುಂಬಿ ನೋಡುವ ಹಾಗೆ ಚಾಪಲ್ಯದ ಕಣ್ಣುಗಳನ್ನು ಇಷ್ಟಗಲ ಮಾಡಿಕೊಂಡು ನೋಡುತ್ತಿದ್ದ ಕಾಸರಗೋಡಿನ ಪದುಮಾರ ಸಾಹೇಬರು ತುಸು ಮೆಲುವಾಗಿ ಸೂಸುವ ವ್ಯಂಗ್ಯದ ನಗೆ ನಕ್ಕು ನಾಚಿಕೊಂಡರು. ಒಬ್ಬರಿಗೊಬ್ಬರು ಗುಸುಗುಸು ಮಾತಾಡಿಕೊಂಡವರಂತೆ ಒಬ್ಬೊಬ್ಬರೆ ತಲೆಯೆತ್ತಿ ನೋಡುತ್ತಿದ್ದರು. ಆ ಹಾಳು ಕೆಲಸದವಳನ್ನು ಮನೆಗೆ ಸೇರಿಸಿಕೊಳ್ಳಬಾರದೆಂದೂ ಈ ಪದುಮಾರನನ್ನು ಕುತ್ತಿಗೆ ಹಿಚುಕಿ ಸಾಯಿಸಬೇಕೆನಿಸಿತು.

ಕೂಡಲೆ ಛೇಂಬರಿಗೆ ಬರಲು ಬಾಸ್ ಅಪ್ಪಣೆಯಾಯ್ತು. ಹೊಸ ಪ್ರಾಜೆಕ್ಟ್ ಲಾಂಚ್ ಆಗುವವರೆಗೂ ಈ ಅಲೆದಾಟ ತಪ್ಪುವುದಿಲ್ಲ, ಈ ವಿದೇಶಿ ಕಂಪೆನಿಗಳ ಲಗಾಲಗಾಟಿಯಲ್ಲಿ, ಪೈಪೋಟಿಯಲ್ಲಿ ತಮ್ಮ ಕಂಪೆನಿಯ ಹೊಸ ಪ್ರಾಡಕ್ಟ್ ಎಷ್ಟು ನವನವೀನವಾಗಿ ಮಾರ್ಕೆಟ್ ಆಗಬೇಕೆಂಬುದಕ್ಕೆ ಈಗಾಗಲೇ ಹತ್ತಾರು ಬೈಠಕ್‌ಗಳನ್ನು, ನೂರಾರು ಬಗೆಯ ವಿನ್ಯಾಸಗಳನ್ನು ಸಿದ್ಧಪಡಿಸಲಾಗಿತ್ತು. ಸದ್ಯದಲ್ಲಿಯೇ ಇಡೀ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಒಂದು ಪರಿಚಯಪತ್ರ ತಯಾರು ಮಾಡುವ ಜವಾಬ್ದಾರಿಯನ್ನು ವಿನಿತಾಳಿಗೆ ವಹಿಸಲಾಗಿತ್ತು. ಬಾಸ್ ಯಾಕೋ ಇವತ್ತು ಗರಂ ಆಗಿದ್ದರು. ಇವತ್ತು ಅನ್ನುವುದೇನು ಆ ಶಿವನು ಈ ಇಂಥ ಗಡತ್ರಮೂತಿಯ ಬಾಸ್‌ಅನ್ನು ತಾನೆ ಪ್ರಿಂಟ್ ಹಾಕಿ ಕಳಿಸಿದ್ದನೇನೋ ಅನ್ನುವಂತೆ ಯಾವ ಕಾಲಕ್ಕೂ ಉರಿಕೆಂಡವಾಗಿರುತ್ತಿದ್ದ. ಬಾಕಿ ಉಳಿಸಿರುವ ಅವಸರದ ಕೆಲಸಗಳ ಬಗ್ಗೆ ಮಾತಾಡುತ್ತಾನೋ ಇಲ್ಲವೇ ತಡವಾಗಿ ಬಂದದ್ದಕ್ಕೆ ಇನ್ನೇನು ಬಾಯ್ದೆರೆದು ತಾನೊಂದು ಕ್ಷುದ್ರದೇವತೆಯೆಂಬಂತೆ ಹರಿಹಾಯುತ್ತಾನೆನ್ನುವಷ್ಟರಲ್ಲಿ ಒಳಬಂದ ಹೊಸ ಆಸಾಮಿಯನ್ನು ಕಂಡು ಮಂದಸ್ಮಿತನಾದ.

'ಹ್ಲಾ... ವಿನಿತಾ ಇವರು ಮಿ. ವೈರಮುಡಿ. ನಮ್ಮ ಹೊಸ ಪ್ರಾಜೆಕ್ಟ್‌ನ ವಿನ್ಯಾಸಕಾರ. ಬ್ರೋಷರ್ ಟೆಕ್ಸ್ಟ್ ಇವರಿಗೆ ಕೊಡಿ. ಜೊತೆಗೆ ನೀವು ಅವರಿಗೆ ಹೆಲ್ಪ್ ಮಾಡಿ. ಈ ಪ್ರಾಜೆಕ್ಟ್‌ಅನ್ನು ಇಂಡಿಯಾದಲ್ಲಿ ಸಕ್ಸೆಸ್ ಮಾಡಲೇಬೇಕು,' ಎಂದು ಒಂದೇ ಮಾತಿಗೆ ಸಿಇಓ ತಮ್ಮ ಪಾಡಿಗೆ ತಾವು ಕೆಲಸದಲ್ಲಿ ಬಿಜಿಯಾದರು.

ಕೋಲುಮುಖ, ಉದ್ದಮೂಗು, ಅಗಲವಾದ ಹಣೆ, ಜರ್ಮನ್ ಶೈಲಿಯಲ್ಲಿ ಕಟ್‌ಹೊಡೆಸಿದ್ದ ಮೀಸೆ, ಹೆಳಲು ಹಾಕುವಂತೆ ಉದ್ದಬಿಟ್ಟಿದ್ದ ಕೂದಲುಗಳನ್ನು ಏರಿಸಿ ಹಿಂಭಾಗದಲ್ಲೊಂದು ರಬ್ಬರ್‌ನಲ್ಲಿ ಸಿಕ್ಕಿಸಿದ್ದ. ಅಂಗಿಯೋ ಡೊಗಳಬಗಳ ಜೋತಾಡುತ್ತಿತ್ತು. ಜೀನ್ಸ್ ಮೈಗಂಟಿಕೊಂಡಿದ್ದ ಪ್ಯಾಂಟ್, ಕೊರಳಿಗೊಂದ ಮಫ್ಲರ್... ಬಟ್ಟೆಗೂ ದೇಹಕ್ಕೂ ಹೊಂದಾಣಿಕೆ ಇರಲಿಲ್ಲವಾದ್ದರಿಂದ ಉಳ್ಳಾಗಡ್ಡಿ ಹೊಲದಲ್ಲಿನ ಬೆದರಪ್ಪನಂತೆಯೂ... ಹೋಳಿ ಕಾಮಣ್ಣನಂತೆಯೂ... ಆಫ್ಘಾನಿಸ್ತಾನದ ಉಗ್ರನಂತೆಯೂ ಒಮ್ಮೊಮ್ಮೆ ಸಾಕ್ಷಾತ್ ಬಾಕ್ಸಿಂಗ್‌ನ ಖಾಲಿ ರಿಂಗ್‌ನಂತೆಯೂ ಕಾಣುತ್ತಿದ್ದ ಆ ವ್ಯಕ್ತಿಯನ್ನು ಪ್ರತಿಯೊಬ್ಬರು ಹುಬ್ಬೇರಿಸಿ ಪ್ರಶ್ನಾರ್ಥಕ ಕಣ್ಣನ್ನೆಯೊಂದಿಗೆ ಸ್ವಾಗತಿಸಿದರು.

'ಹಲೋ!' ಎನ್ನುತ್ತಲೆ... 'ನಮಸ್ಕಾರ' ಎಂದು ಕೈಮುಗಿದ ಅಸ್ತವ್ಯಸ್ತ ಲೋಕದ ಈ ಕಲ್ಪನಾ ಜೀವಿ. ಅಷ್ಟೊತ್ತಿಗೆ ಕಾಫಿ ಬಂದಿತು. 'ಕಾಫಿ ಕುಡಿತಾ ಮಾತಾಡೋಣ...' ಎಂದಳು.

'ಆಕ್ಚುವಲೀ ನಾನು ಕಾಫಿ ಕುಡಿಯೋದಿಲ್ಲ! ಪರವಾಯಿಲ್ಲ ನಿಮ್ಮ ಸಲುವಾಗಿ ಕುಡಿತೇನೆ.'

ಕುಡಿಯಲ್ಲ ಎಂದರೆ ಮುಗಿಯುತ್ತಿತ್ತು... ನನ್ನ ಸಲುವಾಗಿ ಕುಡಿಯುತ್ತೇನೆ ಅನ್ನುವುದು ತುಸು